11-30 A.M

SRI H. M. CHANNABASAPPA (Minister for Public Works and Electricity) :—Sir, the Hon. Member's contention is that he has given notice of an adjournment motion and motion of a short duration discussion. These are pending with the Speaker to be considered on merits and action taken. I think the Hon. Member will do well to await the decision of the Speaker.

MR. DEPUTY SPEAKER :—If the Hon. Member has given notice so late as this what can be done? It takes its own time

Satyagraha by ryots in Mangapura village, Sorab Taluk

ಶ್ರೀ ಸಿ. ಬೈರೇಗೌಡ :—ನಾನು ನಿನ್ನೆ ಸೊರಬ ತಾಲ್ಲೂಕಿನ ಮಂಗಾಪುರ ಗ್ರಾಮದಲ್ಲಿ ೨೨ ಜನ ಗೇಣಿ ರೈತರು ಸತ್ಯಾಗ್ರಹ ಮಾಡಿದ್ದಾರೆ ಜೈಲಿಗೆ ಹೋಗಿದ್ದಾರೆ. ಅದರ ಬಗ್ಗೆ ಒಂದು ವರದಿಯನ್ನು ಕೊಡಬೇಕೆಂದು ಕೇಳಿದ್ದರೂ ಇದ ವರೆಗೆ ಅದು ಬಂದಿಲ್ಲ. ನಾನು ನಿನ್ನೆಯೂ ಕೂಡ ಇದನ್ನು ಪ್ರಸ್ತಾಪ ಮಾಡಿದ್ದೇನೆ. ಬೆಳೆ ಬೆಳೆದವರು ೧೫ ಜನ ರೈತರನ್ನು ಜಮೀನಿಗೆ ಪ್ರವೇಶಮಾಡಿದ ರೀತಿಯಲ್ಲಿ ಪೋಲೀಸಿನವರು ಪ್ರತಿಬಂಧನೆ ಮಾಡಿದ್ದಾರೆ. ಅಂತಹ ಸಮಯದಲ್ಲಿ ಸರ್ಕಾರದವರು ತೀವ್ರ ಕ್ರಮವನ್ನು ತೆಗೆದುಕೊಳ್ಳದಿದ್ದರೆ ಬಹಳ ತೊಂದರೆಯಾಗುತ್ತದೆ. ಇನ್ನೊಂದು ವಿಷಯ. ಸೊರಬ ತಾಲ್ಲೂಕಿನ ಮಾಗಡಿ ಗ್ರಾಮದಲ್ಲಿ ೪೬ ಜನ ರೈತರು ಜೈಲಿನಲ್ಲಿದ್ದಾರೆ. ಅಲ್ಲಿರತಕ್ಕ ಪಹಣಿ ತಿದ್ದುಪಡಿಯಾಗಿರುವ ವಿಷಯ. ಸರ್ಕಾರದ ಅಧಿಕಾರಿಗಳ ಬೇಬಲದಿಂದ ಪಹಣಿಗಳನ್ನು ಅಕ್ರಮವಾಗಿ ತಿದ್ದಿದ್ದಾರೆ. ಕೆಲವು ಅಧಿಕಾರಿಗಳು ರೈತರು ತಮ್ಮ ಜಮೀನನ್ನು ಪ್ರವೇಶಮಾಡದೇ ಇರುವ ರೀತಿಯಲ್ಲಿ ಜಮೀನ್ದಾರರ ಜೊತೆಯಲ್ಲಿ ಸೇರಿಕೊಂಡು ಪೋಲೀಸಿನವರು ರೈತರಿಗೆ ತೊಂದರೆ ಕೊಡುತ್ತಿದ್ದಾರೆ. ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಕಾಗೋಡು ತಿಮ್ಮಪ್ಪ :—ಸರ್ಕಾರದವರು ಎಷ್ಟು ದಿವಸಗಳಲ್ಲಿ ರೈತರ ಪರವಾಗಿ ಪಹಣಿಗಳನ್ನು ಸರಿಪಡಿಸುತ್ತಾರೆ ಇದು ಸಾಮೂಹಿಕವಾಗಿ ನಡೆದಿರತಕ್ಕದ್ದು, ನಾವು ಸಾಕಷ್ಟು ಮನವಿಗಳನ್ನು ಸಲ್ಲಿಸಿ ಹೇಳಿದರೂ ಕೂಡ ಅಲ್ಲಿರುವ ಅಧಿಕಾರಿಗಳು ಖುಷಿಯಾಗಿ ಆಲೆಗಾಡುವುದಿಲ್ಲ. ಅದರ ಬಗ್ಗೆ ವಿಚಾರಣೆ ಮಾಡುವುದಿಲ್ಲ. ಇವತ್ತು ಜೈಲಿನಲ್ಲಿದ್ದಾರೆಂದು ಹೇಳುತ್ತಾರೆ. ಅಂತಹ ಸಂಬಂಧರ್ಭದಲ್ಲಿ ಇನ್ನು ಎಷ್ಟು ದಿವಸಗಳಲ್ಲಿ ಪಹಣಿಗಳನ್ನು ದುರಸ್ತುಪಡಿಸುತ್ತಾರೆ? ನಾವು ಮಕ್ಕಳು ಮರಿಗಳನ್ನು ಕಟ್ಟಿಕೊಂಡು ದುಡಿಮೆ ಮಾಡಿದರೂ ಬೆಳೆ ಹಾಳಾಗಿ ಹೋಗುತ್ತಿದೆ. ಅವರ ಬಗ್ಗೆ ಕಂದಾಯ ಮಂತ್ರಿಗಳು ಒಂದು ಹೇಳಿಕೆಯನ್ನು ಕೊಡಬೇಕು. ಬೇರೆಯವರಿಗೆ ಮಾತನಾಡಲು ನೀವು ೩-೪ ಸಾರಿ ಅವಕಾಶ ಕೊಡುತ್ತೀರಿ. ನಮಗೆ ಕೊಡುವುದಿಲ್ಲ. ನಾವು ಬಾಯಿ ಮುಚ್ಚಿಕೊಂಡು ಕೂತುಕೊಳ್ಳಬೇಕಾಗಿ ಬಂದಿದೆ ನಮಗೂ ಇಲ್ಲಿ ಗಲಾಟೆ ಮಾಡುವುದು ಬರುತ್ತದೆ.

MR. DEPUTY SPEAKER :—If any injustice or for that matter grave injustice is done, the matter has to be represented to Government in a forceful manner and that the Hon. Member has done. Simply because a notice is given under this rule or that rule, let not Hon. Members think that things will be set right There are so many motions for discussion under various rules; they have to be processeded, taken serially and considered. If such notices are to be taken, several days will have to be allotted only for them Let not the Hon. Member Sri Thimmappa think that he is slighted All the same I can assure him that due consideration will be given to his request. At the same time, if he wants the matter to be taken up as speedily as possible, let him agitate the matter with the Minister for Revenue. Let us now hear the Hon. Minister for Revenue.

ಶ್ರೀ ಎನ್. ಹುಚ್ಚಮಾಸ್ತಿಗೌಡ :—ಮಾನ್ಯ ಅಧ್ಯಕ್ಷರೇ, ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರು ಮತ್ತು ಮಾನ್ಯ ಶ್ರೀ ಕೋಣಂದೂರು ಲಿಂಗಪ್ಪನವರು ಸೊರಬ ತಾಲ್ಲೂಕು ಮಾಗಡಿಯಲ್ಲಿ ಪಹಣಿಗಳನ್ನು ಬದಲಾವಣೆ ಮಾಡಿರುವ ವಿಷಯಗಳನ್ನು ನನ್ನ ಗಮನಕ್ಕೆ ತಂದುಕೊಟ್ಟಿರುತ್ತಾರೆ. ಈ ವಿಚಾರವಾಗಿ ನಾನು ಜಿಲ್ಲಾಧಿಕಾರಿಗಳಲ್ಲಿ ಫೋನ್ ಮೂಲಕ ವಿಚಾರಿಸಿ ಆಗಿರತಕ್ಕ ಅನ್ಯಾಯಗಳನ್ನು ತೀವ್ರವಾಗಿ ಗಮನಕ್ಕೆ ತೆಗೆದುಕೊಂಡು, ಅವುಗಳನ್ನು ಸರಿಪಡಿಸಬೇಕೆಂದು ಹೇಳಿದೆ. ಅವರು ನನ್ನ ಜೊತೆಯಲ್ಲಿ ಹೇಳಿದ ಪ್ರಕಾರ ಪಹಣಿಗಳನ್ನು ಬದಲಾವಣೆ ಮಾಡಿರುವುದು ನಿಜವೆಂದು ಕಂಡುಬಂದಿದೆ. ಅದನ್ನು ಸರಿಪಡಿಸುತ್ತೇವೆ ಅದಾದಮೇಲೆ ಅಲ್ಲಿ ಹಾಕಿರತಕ್ಕ ಕೇಸುಗಳನ್ನ್ ವಾಪಸ್ಸು ತೆಗೆದುಕೊಳ್ಳುತ್ತೇವೆಂದು ತಿಳಿಸಿದ್ದಾರೆ. ಆ ವಿಷಯವನ್ನು ನಾನು ಮಾನ್ಯ ಸದಸ್ಯರಿಗೆ ತಿಳಿಸುತ್ತಿದ್ದೇನೆ.

ಶ್ರೀ ಕೋಣಂದೂರು ಲಿಂಗಪ್ಪ :—ಮಾನ್ಯ ಮಂತ್ರಿಗಳು ಹೇಳಿದ ಹಾಗೆ ಅಲ್ಲಿರತಕ್ಕ ತಹಶೀಲ್ದಾರರು ಏನೂ ಮಾಡುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ :—ಅವರಿಗೆ ನಾಲ್ಕೈದು ಸಾರಿ ಪರ್ಗವಾಗಿ ಚಾರ್ಜಿ ಆಗಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ :—ಗೇಣೀದಾರರ ವಿಷಯದಲ್ಲಿ ನಾನು ಸ್ಪಷ್ಟವಾಗಿ ಹೇಳುತಿ ದ್ದೇನೆ. ಅವರಿಗೆ ಎಷ್ಟರಮಟ್ಟಿಗೆ ಆಸಕ್ತಿ ಇದೆಯೋ ಅಷ್ಟೇ ಆಸಕ್ತಿ ನಮಗೂ ಇದೆ. ಅವರು ಹೇಳಿದ ಕೂಡಲೇ ಕ್ರಮ ತೆಗೆದುಕೊಳ್ಳದಿದ್ದರೆ ಅದಕ್ಕೆ ತಕ್ಕ ವ್ಯವಸ್ಥೆಮಾಡಲಾಗುತ್ತದೆ. ಈಗ ಅಧಿವೇಶನದ ಅವಧಿ ಪೂರೈಸಿದ ಕೂಡಲೇ ಮತ್ತೆ ಅವರಿಗೆ ಇಷ್ಟೇ ದಿವಸಗಳಲ್ಲಿ ಇದನ್ನು ಮಾಡಿ ಪೂರೈಸಬೇಕೆಂದು ಸೂಚನೆ ಕೊಡುತ್ತೇನೆ.

ಇನ್ನು ಮಂಗಾಪುರದ ವಿಷಯವನ್ನು ತಿಳಿಸಿದ್ದಾರೆ ಅದು ಮೊದಲು ಗಮನಕ್ಕೆ ಬರಲಿಲ್ಲ. ಮಾನ್ಯ ಸದಸ್ಯರು ಆ ವಿಷಯವನ್ನು ಹೇಳಿದ್ದಾರೆ. ಅದೂ ಕೂಡ ಏನಾಗಿದೆ ಎಂಬುದನ್ನು ಡೆಪ್ಯುಟಿ ಕಮೀಷನರ ಜೊತೆಯಲ್ಲಿ ಮಾತನಾಡಿ ಅದಕ್ಕೆ ಎಷ್ಟರಮಟ್ಟಿಗೆ ಸಾಧ್ಯವಿದೆಯೆಂಬ ಬಗ್ಗೆ ನಿಜಾಂಶವನ್ನು ಕಂಡುಹಿಡಿದು ಕೂಡಲೇ ನೊಂದವರಿಗೆ ತಕ್ಕ ಪರಿಹಾರ ಕೊಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ಶ್ರೀ ಸಿ. ಬೈರೇಗೌಡ :—ನನ್ನ ಕಾಲ್ ಅಟೆನ್‌ಷನ್ ನೋಟೀಸ್ ರಾಜ್ಯಕ್ಕೆ ಸಂಬಂಧಪಟ್ಟ ವಿಷಯ. ಸುಮಾರು ೮ ದಿನಗಳಿಂದಲೂ ನನಗೆ ಉತ್ತರ ಬರಲಿಲ್ಲ. ಅದಕ್ಕೆ ತಕ್ಷಣ ಉತ್ತರ ಕೊಡಬೇಕು. ಅದರ ಬಗ್ಗೆ ಬಾಗೇಪಲ್ಲಿ ತಹಶೀಲ್ದಾರರು ಏನು ಮಾಡಿದ್ದಾರೆ. ರೈತರು ಜಮೀನಿಗೆ ಹೋಗಿಲ್ಲವೆಂದು ನೋಟೀಸ್ ಕೊಟ್ಟಿದ್ದಾರೆ. ಇದು ಶಿವಮೊಗ್ಗ ಜಿಲ್ಲೆ ಒಂದರಲ್ಲೇ ಇಲ್ಲ. ಇಡೀ ರಾಜ್ಯದಲ್ಲಿ ನಡೆಯುತ್ತಿದೆ. ಸರ್ಕಾರ ಇದನ್ನು ಸಣ್ಣ ವಿಷಯವೆಂದು ಭಾವನೆಮಾಡಿದ್ದೇ ಆದರೆ, ಇದು ಬಹಳ ಸೀರಿಯಸ್ ಆಗುತ್ತಿದೆ. ಇವತ್ತಿನ ದಿವಸ ಲ್ಯಾಂಡ್ ರಿಫಾರಮ್ಸ್‌ಬಿಲ್ ಬರುವುದಿದೆ. ಅದನ್ನು ಭೂಮಾಲೀಕರು ಅರ್ಥಮಾಡಿ ಕೊಂಡಿದ್ದಾರೆ. ಅಲ್ಲಿ ಗೇಣೀದಾರರಿಗೆ ರಕ್ಷಣೆ ಇಲ್ಲ. ಇದು ಕೇವಲ ಶಿವಮೊಗ್ಗ ಮತ್ತು ಕೋಲಾರ ಜಿಲ್ಲೆಗಳಿಗೆ ಸಂಬಂಧಪಟ್ಟ ವಿಷಯವಲ್ಲ. ಇಡೀ ರಾಜ್ಯಕ್ಕೆ ಸಂಬಂಧಪಟ್ಟ ಪ್ರಶ್ನೆ. ಇದರ ಬಗ್ಗೆ ತೀವ್ರಾಲೋಚನೆ ಮಾಡಿ, ಅಲ್ಲಿ ಎಷ್ಟು ಜನಗಳಿಗೆ ಗಲಭೆ, ಗಾಯ ಆಗಿವೆ, ಅಲ್ಲಿನ ಪರಿಸ್ಥಿತಿ ಏನು ಎಂಬುದನ್ನು ತಿಳಿದು ಇದರ ಬಗ್ಗೆ ಸೂಕ್ತ ಗಮನವನ್ನು ಕೊಡಬೇಕು.

ಶ್ರೀ ಎನ್. ಹುಚ್ಚಮಾಸ್ತಿಗೌಡ :—ಈಗ ಈ ಭೂಶಾಸನವನ್ನು ಜಾರಿಗೆ ತರತಕ್ಕ ಸಂದರ್ಭದಲ್ಲಿ ಈ ರಾಜ್ಯದಲ್ಲಿ ಬಹಳಕಡೆ ಏನೇನು ಆಗುತ್ತಿದೆಯೆಂಬುದನ್ನು ಮಾನ್ಯ ಸದಸ್ಯರು ಗಮನಕ್ಕೆ ತರುತ್ತಿದ್ದಾರೆ. ಅದನ್ನು ನಾನು ಮೊದಲೇ ಅಧಿಕಾರಿಗಳ ಮೂಲಕ ತಿಳಿದಿದ್ದೇನೆ. ಅದಕ್ಕಾಗಿ ಜಿಲ್ಲಾಧಿಕಾರಿಗಳೆಲ್ಲರೂ ಈ ವಿಷಯದಲ್ಲಿ ಕೂತಂ ತಾವೇ ಜವಾಬ್ದಾರಿ ವಹಿಸಬೇಕಾಗಿದೆ. ಲ್ಯಾಂಡ್ ರೆವಿನ್ಯೂ ಆಕ್ಟ್‌ನಲ್ಲಿ ಪಹಣಿಗಳನ್ನು ಬದಲಾಯಿಸಿದ ಪಕ್ಷದಲ್ಲಿ ತಹಶೀಲ್ದಾರರು ಜವಾಬ್ದಾರರಾಗುತ್ತಾರೆ. ಆಗ ಪೋಲೀಸ್ ರಿಪೋರ್ಟ್ ಮೇಲೆ ತೀರ್ಮಾನ ಮಾಡಬಹುದು. ಅವರೇ ನೇರವಾಗಿ ಆಗ ತೀರ್ಮಾನ ತೆಗೆದುಕೊಳ್ಳ ಬಹುದೆಂದು ಸ್ಪಷ್ಟವಾಗಿದೆ. ಸರ್ಕಾರದವರು ಇದರ ಬಗ್ಗೆ ಈಗಾಗಲೇ ಹೆಚ್ಚಿನ ಆಸಕ್ತಿವಹಿಸಿ ಕೆಲಸ ಮಾಡುತ್ತಿದ್ದಾರೆ. ಗೇಣೀದಾರರು ಎಲ್ಲೆಲ್ಲಿ ಒಕ್ಕಲೆಬ್ಬಿಸುವುದಕ್ಕೆ ಪ್ರಯತ್ನ ನಡೆದಿದೆಯೋ ಅದನ್ನು ತಡೆಗಟ್ಟಬೇಕೆಂದು ಅವರಿಗೆ ಸರ್ಕ್ಯೂಲೇಷನ್, ಇನ್‌ಸ್ಟ್ರಕ್ಷನ್ಸ್ ಸಹ ಕೊಡುತ್ತಿದ್ದೇವೆ.